ಕಂ/ಉಪಲೋಕ್/ಬಿಡಿ/2326/2021
ಪಿ.ಓ.ಎ.ಆರ್.ಇ-5

# ಕರ್ನಾಟಕ ಲೋಕಾಯುಕ್ತ

**ಕಂಪ್ಲೇಂಟ್/ಉಪಲೋಕ್/ಬಿಡಿ/2326/2021**
**ಪಿಓ.ಎ.ಆರ್.ಇ-5 (ಮಂಡನಾಧಿಕಾರಿಯವರ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 21/04/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ಎಸ್.ಬಿ. ಸಂಪತ್‌ಕೃಷ್ಣ ಬಿನ್ ಲೇಟ್ ಅಪ್ಪಾಜಿಗೌಡ, ಪ್ರಭಾರ ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,**

ಆದ ನೀವು ಸರ್ಕಾರಿ/ ಸಾರ್ವಜನಿಕ ನೌಕರರಾಗಿದ್ದು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ನಿಮ್ಮ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ ಬೆಂಗಳೂರು ಗ್ರಾಮಾಂತರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಎಸ್.ಬಿ. ಸಂಪತ್‌ಕೃಷ್ಣ ಬಿನ್ ಲೇಟ್ ಅಪ್ಪಾಜಿಗೌಡ, ಪ್ರಭಾರ ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ. ಟಿ.ಎಸ್. ರಾಧಕೃಷ್ಣ, ಪೋಲೀಸ್ ಇನ್ಸ್‌ಪೆಕ್ಟರ್, ಎಸಿಬಿ, ಬೆಂಗಳೂರು ಗ್ರಾಮಾಂತರ,** ಇವರು ಸರ್ಕಾರದ ಪರವಾಗಿ ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಮಾಕೇನಹಳ್ಳಿ ಗ್ರಾಮದ ಸರ್ವೆ ನಂ.18 ರಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಲೈಸೆನ್ಸ್ ನಂ.2403 ರ ಅಡಿಯಲ್ಲಿ ದಿ: 10/12/2005 ರಂದು ಶ್ರೀ. ಕೆಂಪಯ್ಯ ಬಿನ್ ಸಿದ್ದಯ್ಯ, ದೊಡ್ಡಬಳ್ಳಾಪುರ ರಸ್ತೆ, ನೆಲಮಂಗಲ ಟೌನ್ ಇವರ ಮಾಲೀಕತ್ವದಲ್ಲಿರುವ ಮೆ:: ಮಾರುತಿ ಸ್ಟೋನ್ ಕ್ರಷರ್ ಇವರಿಗೆ 10 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರಾಗಿದ್ದು, ಸದರಿಯವರು 2012 ವರೆಗೂ ಯಾವುದೇ ಗಣಿಗಾರಿಕೆ ನಡೆಸಿಲ್ಲವಾದ್ದರಿಂದ, ದಿ: 14/05/2012 ರಂದು ಗುತ್ತಿಗೆಯನ್ನು ಎದುರುದಾರರು ರದ್ದುಪಡಿಸಿರುತ್ತಾರೆ. ಆದರೆ

ಮಾರುತಿ ಸ್ಟೋನ್ ಕ್ರಷರ್‌ನವರು ಅಕ್ರಮವಾಗಿ 2014-15ನೇ ಸಾಲಿನಲ್ಲಿ ಸುಮಾರು 40 ಸಾವಿರ ಮೆಟ್ರಿಕ್ ಟನ್ ಗಣಿಗಾರಿಕೆ ನಡೆಸಿದ್ದು, ಅದಕ್ಕೆ ಸಂಬಂಧಿಸಿದಂತೆ ಗುತ್ತಿಗೆ ನಿಬಂಧನೆಯಲ್ಲಿ ಹೇಳಿದಂತೆ ದಂಡವನ್ನು ವಸೂಲು ಮಾಡದೆ, ಕೇವಲ 18,00,000/- ರೂ. ಮಾತ್ರ ಪಾವತಿಸಿಕೊಂಡು ಎದುರುದಾರರು ತಮ್ಮ ಅಧಿಕಾರವನ್ನು ದರ್ಬಳಕೆ ಮಾಡಿಕೊಂಡ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ಬೆಂಗಳೂರು ಗ್ರಾಮಾಂತರ ಠಾಣಾ ಗುನ್ನಾ ನಂ.04/2016 ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಕಲಂ 13(1),(ಸಿ) (ಡಿ)(ii) ರೆ/ವಿ. 13(2) ಅಡಿಯಲ್ಲಿ ಪ್ರಕರಣವು ದಾಖಲಾಗಿದ್ದು, ತನಿಖಾಧಿಕಾರಿಯು ತನಿಖೆಯನ್ನು ಪೂರೈಸಿ, ದೋಷಾರೋಪಣ ಪಟ್ಟಿಯನ್ನು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಕಲಂ 13(1),(ಸಿ) (ಡಿ)(ii) ರೆ/ವಿ. 13(2) ಅಡಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಎದುರುದಾರರು ಅಕ್ರಮ ಲಾಭಕ್ಕಾಗಿ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ವಿರುದ್ಧ ಮಾಡಲಾದ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i) ಈ ಪ್ರಕರಣದ ಮೂಲ ಅರ್ಜಿದಾರರಾದ ರಾಘವೇಂದ್ರ ಎಸ್.ಆರ್. ಬಿನ್ ರಾಮಯ್ಯ ಇವರು ದಿ: 20/04/2016 ರಂದು ಬೆಂಗಳೂರು ಗ್ರಾಮಾಂತರ ಎಸಿಬಿ ಠಾಣೆಗೆ ಅರ್ಜಿ ಸಲ್ಲಿಸಿದ್ದು, ಸದರಿಯವರು ಅರ್ಜಿ ಸಲ್ಲಿಸಿದ ನಂತರ ಸದರಿ ಅರ್ಜಿಯ ಪ್ರಾಥಮಿಕ ವಿಚಾರಣೆಯನ್ನು ಎಸಿಬಿಯ ಹಿರಿಯ ಅಧಿಕಾರಿಗಳು ಈ ಪ್ರಕರಣದ ದೂರುದಾರರಾದ **ಶ್ರೀ. ಟಿ.ಎಸ್. ರಾಧಕೃಷ್ಣ, ಪೋಲೀಸ್ ಇನ್ಸ್‌ಪೆಕ್ಟರ್, ಎಸಿಬಿ, ಬೆಂಗಳೂರು ಗ್ರಾಮಾಂತರ,** ಇವರಿಗೆ ವಹಿಸಿದ್ದು, ಪ್ರಾಥಮಿಕ ವಿಚಾರಣೆಯಲ್ಲಿ ಕಂಡುಬಂದ ಅಂಶವೇನೆಂದರೆ, ಎದುರುದಾರರು ಅಕ್ರಮ ಲಾಭಕೋಸ್ಕರ ಅಧಿಕಾರದ ದುರುಪಯೋಗ ಮಾಡಿಕೊಂಡು ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿರುವುದು ಮೇಲ್ನೋಟದಲ್ಲಿ ಕಂಡು ಬಂದಿದ್ದರಿಂದ ಸರ್ಕಾರದ ಪರವಾಗಿ ದಿ: 17/09/2016 ರಂದು ಗ್ರಾಮಾಂತರ ಎಸಿಬಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರು ಬೆಂಗಳೂರು ಗ್ರಾಮಾಂತರ ಎಸಿಬಿ ಠಾಣಾ ಗುನ್ನಾ ನಂ.4/2016ರಲ್ಲಿ

ದಾಖಲಾಗಿದ್ದು, ತನಿಖಾಧಿಕಾರಿಗಳು ತಾಂತ್ರಿಕ ಸಿಬ್ಬಂದಿಯನ್ನು ನೇಮಿಸುವಂತೆ ಆಯುಕ್ತರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಬರೆದುಕೊಂಡಿದ್ದು, ಆಯುಕ್ತರು ಭೂ ವಿಜ್ಞಾನಿಯಾದ ಎನ್. ಲೋಕೇಶ್ ಹಾಗೂ ಸಹಾಯಕ ಅಬಿಯಂತರಾದ ಎ. ರವಿಶಂಕರ್ ಇವರನ್ನು ವೈಜ್ಞಾನಿಕವಾಗಿ ಸ್ಥಳ ಪರಿಶೀಲನೆ ಮಾಡಲು ಹಾಗೂ ತನಿಖಾಧಿಕಾರಿಗೆ ಸಹಕರಿಸಲು ನಿಯೋಜಿಸಿರುತ್ತಾರೆ. ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಲಕ್ಷ್ಮೀಪ್ರಸಾದ್ ಕೆ.ಎನ್. ಹಾಗೂ 2) ಶೇಷಗಿರಿ ಎಸ್. ಇವರುಗಳನ್ನು ಬರಮಾಡಿಕೊಂಡು, ಸದರಿಯವರುಗಳ ಸಮಕ್ಷಮ ದಿ: 19/09/2016 ರಂದು ನೆಲಮಂಗಲ ತಾಲ್ಲೂಕು ಮಾಕೇನಹಳ್ಳಿ ಗ್ರಾಮದ ಸರ್ವೆ ನಂ.18 ಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ, ಪಂಚರುಗಳ ಹಾಗೂ ಭೂ ವಿಜ್ಞಾನಿ ಮತ್ತು ಇಂಜಿನಿಯರ್ ಸಮಕ್ಷಮ ವಿವರವಾದ ಮಹಜರ್‌ನ್ನು ಸಂಜೆ 4.15 ರಿಂದ 5.45 ರವರೆಗೆ ಜರುಗಿಸಿರುತ್ತಾರೆ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿರುತ್ತಾರೆ. ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳನ್ನು ಪರಾಂಭರಿಸಲಾಗಿ ಕಂಡುಬರುವ ಅಂಶವೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಮಾಕೇನಹಳ್ಳಿ ಗ್ರಾಮದ ಸರ್ವೆ ನಂ.18 ರಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಲೈಸೆನ್ಸ್ ನಂ.2403 ರ ಅಡಿಯಲ್ಲಿ ದಿ: 10/12/2005 ರಂದು ಶ್ರೀ. ಕೆಂಪಯ್ಯ ಬಿನ್ ಸಿದ್ದಯ್ಯ, ದೊಡ್ಡಬಳ್ಳಾಪುರ ರಸ್ತೆ, ನೆಲಮಂಗಲ ಟೌನ್ ಇವರ ಮಾಲೀಕತ್ವದಲ್ಲಿರುವ ಮೆ:: ಮಾರುತಿ ಸ್ಟೋನ್ ಕ್ರಷರ್ ಇವರಿಗೆ 10 ವರ್ಷದ ಅವಧಿಗೆ ಮಂಜೂರಾಗಿದ್ದು, ಗುತ್ತಿಗೆ ಕರಾರು ಪತ್ರದ ಭಾಗ-5ರ ಕ್ರಮ ಸಂಖ್ಯೆ 3 ಅನ್ವಯ ಖನಿಜವನ್ನು ರವಾನಿಸಲು ಖನಿಜ ರವಾನೆ ಪರವಾನಿಗಿ ಪಡೆದುಕೊಳ್ಳಬೇಕು. ಪರವಾನಿಗಿ ಪಡೆದುಕೊಳ್ಳದೆ ರವಾನೆ ಮಾಡಿದಲ್ಲಿ, ರಾಜಧನದ 5 ಪಟ್ಟು ದಂಡವನ್ನು ವಿಧಿಸುವ ನಿಬಂಧನೆಗೆ ಒಳಪಟ್ಟು ಗಣಿಗಾರಿಕೆ ಲೈಸನ್ಸ್ ಮಂಜೂರುಮಾಡಲಾಗಿರುತ್ತದೆ. ವಿಷಯವು ಹೀಗಿರಲು 2012ನೇ ಸಾಲಿನವರೆಗೆ ಮಾರುತಿ ಸ್ಟೋನ್ ಕ್ರಷರ್ ಇವರು ಯಾವುದೇ ಗಣಿಗಾರಿಕೆಯನ್ನು ನಡೆಸಿಲ್ಲವಾದ್ದರಿಂದ, ಎದುರುದಾರರು ದಿ: 14/05/2012 ರ ಆದೇಶದಂತೆ ಲೈಸನ್ಸ್‌ನ್ನು ರದ್ದುಪಡಿಸಿರುತ್ತಾರೆ. ತದನಂತರದಲ್ಲಿ ಮೆ:: ಮಾರುತಿ ಸ್ಟೋನ್ ಕ್ರಷರ್ ಇವರು ಅಕ್ರಮವಾಗಿ 2014-15ನೇ ಸಾಲಿನಲ್ಲಿ ಸುಮಾರು 40 ಸಾವಿರ ಮೆಟ್ರಿಕ್ ಟನ್ ಗಣಿಗಾರಿಕೆ ನಡೆಸಿರುತ್ತಾರೆ. ನಂತರ ಗುತ್ತಿಗೆದಾರರು ದಿ: 29/11/2012 ರಂದು ಗುತ್ತಿಗೆ ಪುನರ್‌ಸ್ಥಾಪನೆಗೆ ಅರ್ಜಿ ಸಂ:243/2012 ರಲ್ಲಿ ಪರಿಷ್ಕರಣೆ ಕೋರಿ ಜಂಟಿ ನಿರ್ದೇಶಕರು, ಮೈಸೂರು ಇವರಿಗೆ ಅರ್ಜಿ ಸಲ್ಲಿಸಿದ್ದು, ಜಂಟಿ ನಿರ್ದೇಶಕರು ಮೈಸೂರು ಇವರು ಅರ್ಜಿಯನ್ನು ಕೆಲವೊಂದು ನಿಬಂಧನೆಗೊಳಪಟ್ಟು ಅಂದರೆ ಗುತ್ತಿಗೆ ಮೇಲಿನ ಬಾಕಿ ಇದ್ದಲ್ಲಿ ಪಾವತಿಸಿಕೊಂಡು, ಕಲ್ಲು ಗಣಿಗುತ್ತಿಗೆ ಪುನರ್‌ಸ್ಥಾಪನೆಗೆ ನಿಯಮಾನುಸಾರ ಕ್ರಮವಹಿಸಲು ಹಾಗೂ ಗುತ್ತಿಗೆ ಪುನರ್‌ಸ್ಥಾಪನೆ ಮಾಡುವವರೆಗೆ ವರ್ಜಿತ ಪ್ರದೇಶದಲ್ಲಿ ಅನಧಿಕೃತ ಗಣಿಗಾರಿಕೆ ನಡೆಯದಂತೆ ಎಚ್ಚರವಹಿಸುವುದು ಎಂದು ಪ್ರಸ್ತಾಪಿಸಿ, ದಿ: 14/08/2014 ರಂದು

ಅರ್ಜಿಯನ್ನು ಮಂಜೂರು ಮಾಡಿರುತ್ತಾರೆ. 2014-15ನೇ ಸಾಲಿನಲ್ಲಿ ಭೂ ವಿಜ್ಞಾನಿ ಶ್ರೀ. ಜಗದೀಶ್‌ರವರು ಗಣಿಪ್ರದೇಶದ ಪರಿಶೀಲನೆ ನಡೆಸಿ, ಎದುರುದಾರರಿಗೆ ವರದಿಯನ್ನು ದಿ: 06/07/2015 ರಂದು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಖನಿಜ ರವಾನೆ ಪರವಾನಿಗಿ ಪಡೆದುಕೊಳ್ಳದೆ ಸುಮಾರು 40 ಸಾವಿರ ಮೆಟ್ರಿಕ್ ಟನ್ ಖನಿಜವನ್ನು ನಿಯಮಬಾಹಿರವಾಗಿ ರವಾನಿಸಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಸದರಿಯವರು ನೀಡಿದ ವರದಿಯನ್ನು ಗಣನೆಗೆ ತೆಗೆದುಕೊಳ್ಳದೆ ಹಾಗೂ ಕಚೇರಿ ಅಧೀಕ್ಷಕರು ಸೂಕ್ತ ಕ್ರಮ ವಹಿಸುವಂತೆ ಎದುರುದಾರರಿಗೆ ಕಚೇರಿ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿದ್ದರೂ ಸಹ ಮತ್ತು ಗುತ್ತಿಗೆ ನಿಬಂಧನೆಯ ಭಾಗ-5 ರಲ್ಲಿ ಹೇಳಿದಂತೆ ರಾಜಧನದ 5 ಪಟ್ಟು ದಂಡ 1,05,29,411/- ರೂ. ಗಳನ್ನು ಪಾವತಿಸಲು ಹಾಗೂ ದಿ:23/12/2016 ರಂದು 2,02,27,565/- ರೂ.ಗಳ ಬೇಡಿಕೆ ನೋಟೀಸ್ ನೀಡಿ, ನಂತರದಲ್ಲಿ ಮಾರುತಿ ಸ್ಟೋನ್ ಕ್ರಷರ್ಸ್ ಇವರಿಂದ ಅಕ್ರಮ ಸಂಭಾವನೆ ಪಡೆದುಕೊಳ್ಳುವ ಉದ್ದೇಶದಿಂದ ಕೇವಲ 18,00,000/-ರೂ.ಗಳನ್ನು ಪಾವತಿಸಿಕೊಂಡು, ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

ii) ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಪರಿವೀಕ್ಷಣಾ ಟಿಪ್ಪಣಿಯನ್ನು ಜಾರಿ ಮಾಡಲು ಪೋಲೀಸ್ ಸಿಬ್ಬಂದಿ ಹೋದಾಗ ಎದುರುದಾರರು 9ನೇ ಅಪರ ಸತ್ರ ನ್ಯಾಯಾಲಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈಗಾಗಲೇ ವಿಚಾರಣೆ ನಡೆಯುತ್ತಿರುವುದರಿಂದ ನೋಟಿಸ್ ತೆಗೆದುಕೊಳ್ಳಲು ನಿರಾಕರಿಸಿರುತ್ತಾರೆಂದು ಪೋಲೀಸ್‌ರು ವರದಿ ಸಲ್ಲಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ಕಂಡಿಕೆ 17 & 18 ರ ಅನ್ವಯ refusal is good service ಎಂದು ಭಾವಿಸಿ ಅಂತಿಮ ಪರಿಶೀಲನಾ ಟಿಪ್ಪಣಿಯನ್ನು ತಯಾರಿಸಲು ಆದೇಶ ನೀಡಿರುತ್ತಾರೆ. ಈವರೆಗೂ ಎದುರುದಾರರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಎಸಿಬಿ ರಚನೆಯಾದ ನಂತರ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13986/2016 ದಾಖಲಾಗಿದ್ದು ಸದರಿ ಅರ್ಜಿಯಲ್ಲಿ ಐಲಿ ಕಡೆಗೆ ಆದ ಆದೇಶದ ಅನ್ವಯ ದೋಷಾರೋಪಣಾ ಪಟ್ಟಿಯ ಪ್ರತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದರಿಂದ ಈ ಪ್ರಕರಣಕ್ಕೆ ಲಿಮಿಟೇಷನ್ ಬಾದಾ ಇರುವುದಿಲ್ಲ. ಅಲ್ಲದೆ ಎದುರುದಾರರು ನಿವೃತ್ತಿ ಹೊಂದಿ 4 ವರ್ಷಗಳ ಅವಧಿ ಗತಿಸಿದ್ದರೂ ಸಹ ಸರ್ವೋಚ್ಚ ನ್ಯಾಯಾಲಯವು ಕೋವಿಡ್-19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ದಿ: 15/03/2020 ರಿಂದ 28/02/2022 ರ ವರೆಗಿನ ಅವಧಿಯನ್ನು, ಕಾಲಮಿತಿ ಲೆಕ್ಕ ಹಾಕುವಾಗ ವ್ಯವಕಲನ ಮಾಡಲು (In Re Cognizance for Extension of Limitation) ಆದೇಶಿಸಿರುವುದರಿಂದ ಪ್ರಸ್ತುತ ಪ್ರಕರಣಕ್ಕೆ ಕಾಲಮಿತಿಯ ಬಾದಾ ಇರುವುದಿಲ್ಲ.

ಕಂ/ಉಪಲೋಕ್/ಬಿಡಿ/2326/2021
ಪಿ.ಓ.ಎ.ಆರ್.ಇ-5

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

5. ಎದುರುದಾರರು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕೆ.ಸಿ.ಎಸ್.ಆರ್ 214 (2) (ಬಿ) (i) ಅಡಿಯಲ್ಲಿ ಅನುಮತಿಸಿ, ಅದೇ ಕೆ.ಸಿ.ಎಸ್. ಆರ್ ನಿಯಮ 214 (2) (ಬಿ) (iii) ಅನ್ವಯ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅಡಿಯಲ್ಲಿ ದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಎದುರುದಾರರ ವಿರುದ್ಧ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

21/4/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.